**ಕರ್ನಾಟಕ ಸರ್ಕಾರ**
**(ವಾಣಿಜ್ಯ ತೆರಿಗೆಗಳ ಇಲಾಖೆ)**

ಸಂಖ್ಯೆ: ಸಿಸಿಡಬ್ಲೂ/ಸಿಆರ್–23/2013–14

ವಾಣಿಜ್ಯ ತೆರಿಗೆಗಳ ಆಯುಕ್ತರವರ
ಕಛೇರಿ, 1ನೇ ಮುಖ್ಯ ರಸ್ತೆ, ಗಾಂಧಿನಗರ,
ಬೆಂಗಳೂರು–560 009. ದಿನಾಂಕ:31/07/2013

## ಅಧಿಸೂಚನೆ–I

1979ರ ಕರ್ನಾಟಕ ವಿಲಾಸಿ ತೆರಿಗೆ ಅಧಿನಿಯಮದ ಪ್ರಕರಣ 5(A)ರ ಉಪಪ್ರಕರಣ (2)ರ ಪರಂತುಕ ಮತ್ತು ಪ್ರಕರಣ 8ರ ಉಪಪ್ರಕರಣ 1ರ ಪರಂತುಕದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಮೂಲಕ ಅಧಿಸೂಚಿಸುವುದೇನೆಂದರೆ 2013ರ ಆಗಸ್ಟ್ 16ನೇ ದಿನದಿಂದ ಅನ್ವಯವಾಗುವಂತೆ ಸದರಿ ಅಧಿನಿಯಮದಡಿಯಲ್ಲಿ ಹತ್ತು ಸಾವಿರ (10,000) ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಮೊತ್ತದ ತೆರಿಗೆ ಅಥವಾ ಯಾವುದೇ ಮೊಬಲಗನ್ನು ಸಂದಾಯ ಮಾಡಲು ಬಾಧ್ಯತೆ ಇರುವ ಪ್ರತಿಯೊಬ್ಬ ಮಾಲೀಕನು ಅಂತಹ ಮೊಬಲಗನ್ನು ಇಂಟರ್‌ನೆಟ್ ಮುಖಾಂತರ ವಿದ್ಯುನ್ಮಾನ ಪಾವತಿಯನ್ನು ಈ ಕೆಳಕಂಡ ವಿಧಾನದಲ್ಲಿ ಸಂದಾಯ ಮಾಡತಕ್ಕದ್ದು:–

1. ವಿದ್ಯುನ್ಮಾನ ಪಾವತಿ ಮಾಡಲು ಬಾಧ್ಯನಾದ ಮಾಲೀಕನು ಜಾಲತಾಣ (web-site) https://vat.kar.nic.in/epay ಅನ್ನು ತೆರೆಯಬೇಕು ಅಥವಾ ಜಾಲತಾಣ https://ctax.kar.nic.in ನಲ್ಲಿ ಇರುವ 'e-Payment (All Acts)' ಎನ್ನುವ ಸಂಪರ್ಕದ ಮೇಲೆ Click ಮಾಡಬೇಕು. ಸದರಿ ಜಾಲತಾಣ ಮುಕ್ತ ಜಾಲತಾಣವಾಗಿದ್ದು, ಬಳಕೆದಾರನ ಅಧಿಕೃತತೆಯ ಅವಶ್ಯವಿರುವುದಿಲ್ಲ.

2. ಮುಖ್ಯ ಪರದೆಯ ಮೇಲೆ ಪ್ರದರ್ಶಿತವಾಗುವ ಎಂಟು ತೆರಿಗೆಗಳ ಪಟ್ಟಿಯಲ್ಲಿ ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮವನ್ನು ತೆರಿಗೆ ಪ್ರವರ್ಗವೆಂದಾಗಿ ಆಯ್ಕೆ ಮಾಡಿ ಅದರ ಮೇಲೆ Click ಮಾಡಿ.

3. ಪರವಾನಿಗೆ (Permit) ಸಂಖ್ಯೆಯನ್ನು ನಮೂದಿಸಿರಿ. ಸಂಬಂಧಿತ ತಂತ್ರಾಂಶ ಸದರಿ ಪರವಾನಿಗೆ (Permit) ಸಂಖ್ಯೆಯ ಸಿಂಧುತ್ವವನ್ನು ಖಚಿತಪಡಿಸಿಕೊಳ್ಳುತ್ತದೆ ಮತ್ತು ಪರವಾನಿಗೆ ಪಡೆದವರ ಹೆಸರು, ವಿಳಾಸ ಮತ್ತು ಅವನು/ಅವಳು ಪರವಾನಿಗೆ ಪಡೆದ ಕಛೇರಿಯ ವಿವರಗಳು ತಂತಾನೇ ಪ್ರದರ್ಶಿತವಾಗುತ್ತದೆ.

4. ತೆರಿಗೆ ಅವಧಿ, ತೆರಿಗೆ ಅಥವಾ ಇತರೆ ಮೊತ್ತ, ಬಡ್ಡಿ, ದಂಡ ಮುಂತಾದ ವಿವರಗಳನ್ನು ನಿಗದಿ ಮಾಡಿರುವ ಸಂಬಂಧಿತ ಆವರಣಗಳಲ್ಲಿ ನಮೂದಿಸಿ.

5. ಮಾಲೀಕನು ನೆಟ್ ಬ್ಯಾಂಕಿಂಗ್ ಸೌಲಭ್ಯವಿರುವ ಖಾತೆ ಹೊಂದಿದ ಮತ್ತು ಇ–ಪಾವತಿಗೆ ಸಮರ್ಥಗೊಳಿಸಿದ ಬ್ಯಾಂಕ್‌ಗಳಲ್ಲಿ ಒಂದನ್ನು ಜಾರು ಪಟ್ಟಿ (Drop down List)ಯಿಂದ ಆಯ್ಕೆ ಮಾಡಿ ಮತ್ತು 'NEXT' ಎನ್ನುವುದರ ಮೇಲೆ Click ಮಾಡಿ.

6. ಗಣಕಯಂತ್ರದ ಮುಖ್ಯ ಪರದೆಯ ಮೇಲೆ ಪ್ರದರ್ಶಿತವಾಗುವ ವಿವರಗಳನ್ನು ಪರಿಶೀಲಿಸಿ ಮತ್ತು ಅಂತಹ ವಿವರಗಳನ್ನು ದೃಢೀಕರಿಸಿಕೊಂಡು ನಂತರ 'Submit' ಎನ್ನುವುದರ ಮೇಲೆ Click ಮಾಡಿ. ಈ ವಿವರಗಳನ್ನು ಗಣಕಯಂತ್ರ ವ್ಯವಸ್ಥೆ ದಾಖಲಿಸುತ್ತದೆ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ಉಲ್ಲೇಖ ಸಂಖ್ಯೆ (CTD Reference Number) ಎಂದು ಕರೆಯಲಾಗುವ ಒಂದು ವಿಶಿಷ್ಟ ಸಂಖ್ಯೆ ಪ್ರದರ್ಶಿತವಾಗುತ್ತದೆ. ಈ ವಿಶಿಷ್ಟ ಸಂಖ್ಯೆಯನ್ನು ಭವಿಷ್ಯದ ಬಳಕೆಗಾಗಿ ಬರೆದಿಟ್ಟುಕೊಳ್ಳತಕ್ಕದ್ದು.

7. ನಂತರ ಗಣಕಯಂತ್ರ ವ್ಯವಸ್ಥೆಯು ನಮೂದಿತ ಪಾವತಿ ಮೊತ್ತದ ವಿವರಗಳನ್ನು ಆಯ್ಕೆ ಮಾಡಿದ ಬ್ಯಾಂಕಿನ ಜಾಲತಾಣಕ್ಕೆ ವರ್ಗಾಯಿಸುತ್ತದೆ ಮತ್ತು ಆ ಬ್ಯಾಂಕಿನ ಜಾಲತಾಣವನ್ನು ತೆರೆಯುತ್ತದೆ.

8. ಬ್ಯಾಂಕಿನ ಜಾಲತಾಣದ ಸಂಪರ್ಕ ಪುಟವು ತೆರೆದುಕೊಳ್ಳುತ್ತದೆ. ಮಾಲೀಕನು ತನ್ನ ವಿವರಗಳನ್ನು ಮತ್ತು ಅಂತಹ ಬ್ಯಾಂಕ್ ಒದಗಿಸಿದ ಬಳಕೆದಾರನ ಹೆಸರು ಮತ್ತು ಸಂಕೇತಪದಗಳನ್ನು ಉಪಯೋಗಿಸಿ ಅದನ್ನು ಅಧಿಕೃತಗೊಳಿಸತಕ್ಕದ್ದು.

9. ಈಗ ಬ್ಯಾಂಕಿನ ಜಾಲತಾಣವು "ತೆರಿಗೆ ಪ್ರವರ್ಗ", "ಪರವಾನಿಗೆ (Permit) ಸಂಖ್ಯೆ" "ವಾಣಿಜ್ಯ ತೆರಿಗೆ ಇಲಾಖೆಯ ಉಲ್ಲೇಖ ಸಂಖ್ಯೆ" (CTD Reference Number) ಮತ್ತು "ಮೊಬಲಗು" (Amount)ಗಳನ್ನು ಪ್ರದರ್ಶಿಸುತ್ತದೆ. ಈ ಹಂತದಲ್ಲಿ ಪಾವತಿ ವಿವರಗಳನ್ನು ಮಾರ್ಪಾಡು ಮಾಡಲು ಅವಕಾಶವಿರುವುದಿಲ್ಲ.

10. "Confirm the Payment" ಎನ್ನುವುದರ ಮೇಲೆ ಮಾಲೀಕನು Click ಮಾಡಿದ ನಂತರ Core Banking ವ್ಯವಸ್ಥೆಯಲ್ಲಿ ವಹಿವಾಟು ನಡೆಯುತ್ತದೆ.

11. ಪಾವತಿ ಪ್ರಕ್ರಿಯೆ ಪೂರ್ಣಗೊಂಡ ನಂತರ, ಬ್ಯಾಂಕಿನ ಜಾಲತಾಣದ ಸಂಪರ್ಕ ವಾಣಿಜ್ಯ ತೆರಿಗೆ ಇಲಾಖೆಯ ಜಾಲತಾಣಕ್ಕೆ ವರ್ಗಾಯಿಸಲ್ಪಡುತ್ತದೆ. ಬ್ಯಾಂಕಿನ ಉಲ್ಲೇಖ ಸಂಖ್ಯೆಯನ್ನು ಒಳಗೊಂಡಂತೆ ಯಶಸ್ವಿ ಪಾವತಿಯ ವಿವರಗಳನ್ನು ಜಾಲತಾಣ https://vat.kar.nic.in/epay ಪ್ರದರ್ಶಿಸುತ್ತದೆ.

12. "ಪ್ರಿಂಟ್ ಚಲನ್" (Print Challan) ಎಂಬುವುದರ ಮೇಲೆ Click ಮಾಡಿ ಮುದ್ರಿತ ಚಲನ್‌ನ್ನು ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಾಲತಾಣ https://vat.kar.nic.in/epay ನಲ್ಲಿ ಅಳವಡಿಸಿದ ಬಳಕೆದಾರರ ಕೈಪಿಡಿಯನ್ನು ನೋಡಬಹುದು.

(ಅಜಯ್ ಸೇಠ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಪ್ರತಿಯನ್ನು ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಸರ್ಕಾರಿ ಕೇಂದ್ರ ಮುದ್ರಣಾಲಯ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು, 560059 ಇವರಿಗೆ ಕಳುಹಿಸುತ್ತಾ ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಮುದ್ರಿಸಿ 100 ಪ್ರತಿಗಳನ್ನು ಒದಗಿಸಲು ಕೋರಲಾಗಿದೆ.